ಕೊಠಡಿಗಳನ್ನು ಪೂರ್ಣಗೊಳಿಸಲು ಅಗತ್ಯವಾಗಿರುವ ರೂ. 16.268 ಲಕ್ಷಗಳನ್ನು ಜವಾಹರ್ ರೋಜ್‌ಗಾರ್ ಯೋಜನೆಯ ಶೇಕಡಾ 80ರ 93-94ರ ಮಂಡಲ ನಿಧಿಯಿಂದ ಬಿಡುಗಡೆ ಮಾಡಲಾಗುತ್ತಿದೆ.

ಉದ್ಭವಿಸುವುದಿಲ್ಲ

ವಿಷಯ:- ಸರ್ಕಾರದಿಂದ ನಡೆಸುತ್ತಿರುವ ವೈದ್ಯಕೀಯ ಮಹಾ ವಿದ್ಯಾಲಯಗಳು ಮತ್ತು ಅಲ್ಲಿಯ ವಿದ್ಯಾರ್ಥಿಗಳ ಪ್ರವೇಶದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 267(542)

ಶ್ರೀ ಆರ್.ಎಲ್.ಜಾಲಪ್ಪ(ದೊಡ್ಡಬಳ್ಳಾಪುರ)

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದಿಂದ ನಡೆಸುತ್ತಿರುವ ವೈದ್ಯಕೀಯ ಮಹಾವಿದ್ಯಾಲಯಗಳು ಮತ್ತು ಅಲ್ಲಿಯ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ?

ಆ) ಐಎಂಸಿ ಪ್ರಕಾರ ಪ್ರತಿಯೊಂದು ವಿಷಯ ವಿಭಾಗಗಳಲ್ಲಿ ಹುದ್ದೆಯ ಮಂಜೂರಾತಿ ಪ್ರತಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಸೇರ್ಪಡೆಗೆ ಅನುಗುಣವಾಗಿ

ಇ) ಈಗ ವಿಷಯ ವಿಭಾಗಗಳಲ್ಲಿ ಹುದ್ದೆ ಮಂಜೂರಾತಿ ಮತ್ತು ಪ್ರತಿ ಕಾಲೇಜಿನಲ್ಲಿರುವ ಹುದ್ದೆಗಳ ಕೊರತೆ?

ಈ) ಐಎಂಸಿಯಿಂದ ಪ್ರತಿ ಕಾಲೇಜಿಗೆ ಮಂಜೂರಾದ ಪ್ರವೇಶ ಸಂಖ್ಯೆ?

ಉ) ಆ ಕಾಲೇಜುಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಯಾವಾಗಿನಿಂದ ಭರ್ತಿ ಮಾಡಿಲ್ಲ?

ಶ್ರೀ ಜಿ.ರಾಮಕೃಷ್ಣ

(ವೈದ್ಯಕೀಯ ಶಿಕ್ಷಣ ಸಚಿವರು)

ಪಟ್ಟಿ ಲಗತ್ತಿಸಿದೆ –ಅನುಬಂಧ-1

ಐಎಂಸಿ ಪ್ರಕಾರ ಪ್ರತಿ 100 ವಿದ್ಯಾರ್ಥಿಗಳ ಸೇರ್ಪಡೆಗೆ ಕನಿಷ್ಠ 1 ಪ್ರಾಧ್ಯಾಪಕರು, 4 ಸಹಾಯಕ ಪ್ರಾಧ್ಯಾಪಕರು ಮತ್ತು 9 ಉಪನ್ಯಾಸಕರು ಇರಬೇಕು.

ಪಟ್ಟಿ ಲಗತ್ತಿಸಿದೆ -ಅನುಬಂಧ-2-

ಅನುಬಂಧ -1ರಲ್ಲಿದ್ದಂತೆ

1982 ರಲ್ಲಿ ಆಯ್ಕೆಯಾದ ಭೋಧಕ ವರ್ಗದವರ ಮೇಲೆ ಅನೇಕ ರಿಟ್ ಅರ್ಜಿಗಳಿದ್ದು ಈಗ, ಈ ವಿಷಯವು ಸರ್ವೋಚ್ಚ ನ್ಯಾಯಾಲಯದಲ್ಲಿ ಅಂತಿಮ ತೀರ್ಪಿಗಾಗಿ ಕಾಯಲಾಗುತ್ತಿದೆ. ಈ ಕಾರಣದಿಂದ ತದನಂತರ ಉಪನ್ಯಾಸಕರ ಹುದ್ದೆಯಲ್ಲಿ ನೇಮಕಾತಿ ಮಾಡಿರುವುದಿಲ್ಲ.

ಅನುಬಂಧ-1

ವೈದ್ಯಕೀಯ ಮಹಾವಿದ್ಯಾಲಯಗಳು:

	ಹೆಸರು	ಪ್ರವೇಶ ಸಾಮರ್ಥ್ಯ
1)	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು	200 ಸೀಟು
2)	ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು	175 ಸೀಟು
3)	ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ,ಹುಬ್ಬಳ್ಳಿ	130 ಸೀಟು
4)	ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ	130 ಸೀಟು

ಹುದ್ದೆಗಳ ವಿವರ ದಿನಾಂಕ : 4-8-93ರಲ್ಲಿದ್ದಂತೆ ಅನುಬಂಧ-2

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಬೆಂಗಳೂರು ಮಂಜೂರಾತಿ	ಭರ್ತಿ	ಖಾಲಿ	ಮೈಸೂರು ಮಂಜೂರಾತಿ	ಭರ್ತಿ	ಹುಬ್ಬಳ್ಳಿ ಖಾಲಿ	ಬಳ್ಳಾರಿ ಮಂಜೂರಾತಿ	ಭರ್ತಿ	ಒಟ್ಟು ಖಾಲಿ
1	2	3	4	5	6	7	8	9	10	11
1.	ಪ್ರಾಧ್ಯಾಪಕರು	85	77	08	49	42	07	47	33	14
2.	ಸಹಾಯಕ ಪ್ರಾಧ್ಯಾಪಕರು	95	79	16	56	31	25	58	33	25
3.	ಉಪನ್ಯಾಸಕರು	158	134	24	102	66	36	105	78	27

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಮಂಜೂರಾತಿ	ಭರ್ತಿ	ಖಾಲಿ	ಮಂಜೂರಾತಿ	ಭರ್ತಿ	ಖಾಲಿ
		12	13	14	15	16	17
1.	ಪ್ರಾಧ್ಯಾಪಕರು	44	34	10	225	186	39
2.	ಸಹಾಯಕ ಪ್ರಾಧ್ಯಾಪಕರು	43	23	20	252	166	86
3.	ಉಪನ್ಯಾಸಕರು	85	51	34	450	329	121